2. ಶಂಕರ್‌ನಾಗ್ ಚಿತ್ರಮಂದಿರ:– ಶಂಕರ್‌ನಾಗ್ ಚಿತ್ರಮಂದಿರದ ಪರವಾನಗಿ ಅವಧಿಯು ದಿನಾಂಕ 31.12.2004 ರಂದು ಮುಗಿದಿದ್ದು, ಪುನಃ ಈ ಚಿತ್ರಮಂದಿರವನ್ನು ದಿನಾಂಕ 1.1.2005 ರಂದು ತಾತ್ಕಾಲಿಕವಾಗಿ 11 ತಿಂಗಳ ಅಥವಾ ಹೊಸ ಟೆಂಡರ್ ಅಂತಿಮವಾಗುವವರೆವಿಗೆ ಇವುಗಳಲ್ಲಿ ಯಾವುದು ಮೊದಲೊ ಅಲ್ಲಿಯವರೆವಿಗೆ ಮಾಸಿಕ ರೂ. 2,75,000–00 ಪರವಾನಗಿ ಶುಲ್ಕದ ಆಧಾರದ ಮೇಲೆ ಪರವಾನಗಿ ನವೀಕರಿಸಲಾಗಿದೆ. ಪರವಾನಗಿಯು ದಿನಾಂಕ 30.11.2005ಕ್ಕೆ ಮುಕ್ತಾಯಗೊಳ್ಳುವುದರಿಂದ, ಚಿತ್ರಮಂದಿರವನ್ನು ಟೆಂಡರ್ ಮೂಲಕ ವಿತರಣೆ ಮಾಡುವ ಸಲುವಾಗಿ M/s. IDECK ಸಂಸ್ಥೆ ರವರಿಗೆ ಟೆಂಡತ್ ದಾಖಲಾತಿಗಳನ್ನು ಸಿದ್ಧಪಡಿಸುವ ಕಾರ್ಯವನ್ನು ವಹಿಸಲಾಗಿದೆ. ಮುಂದಿನ ದಿನಗಳಲ್ಲಿ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುವುದು.

ಉ) ಪುಟ್ಟಣ್ಣ ಕಣಕಾಲ್ ಚಿತ್ರಮಂದಿರದ ಪರವಾನಗಿ ಶುಲ್ಕ ಜೂನ್ 1985 ರಿಂದ ರೂ. 25,000/– ಗಳಾಗಿದ್ದು, ಕ್ರಮೇಣ ಪರಿಷ್ಕರಿಸಿ, ಮಾಹೆಯಾನ ರೂ. 72,000/– (60,000/– ಪರವಾನಗಿ ಶುಲ್ಕ + 12,000 ಸೇವಾ ಶುಲ್ಕ) ಪಡೆಯಲಾಗುತ್ತಿತ್ತು.

ಶಂಕರ್‌ನಾಗ್ ಚಿತ್ರಮಂದಿರದ ಪರವಾನಗಿ ಶುಲ್ಕ ರೂ. 2,00,000/– ಇದ್ದು, ದಿನಾಂಕ 1.1.2005 ರಿಂದ ನವೀಕರಿಸಿ, ಮಾಸಿಕ ರೂ. 2,75,000/– ಪರವಾನಗಿ ಶುಲ್ಕವನ್ನು ಪಡೆಯಲಾಗುತ್ತಿದೆ. ಈ ಚಿತ್ರಮಂದಿರಗಳನ್ನು ಖಾಸಗಿಯವರಿಗೆ ವಹಿಸಲು ಪಾಲಿಕೆಯಲ್ಲಿ ಸಧ್ಯಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

5378(5427) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ಕೆಂಪಾಂಬುದಿ ಕೆರೆಯಲ್ಲಿ ಕೊಳಚೆ ನೀರು ಹರಿದು ಬರುತ್ತಿದ್ದು ಹಾಗೂ ಪಾಚಿ ಆವರಿಸಿಕೊಂಡಿರುವುದರಿಂದ, ನೀರು ಕೆಟ್ಟು ಹೋಗಿ ಪರಿಸರ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಕೆರೆಯ ಅಭಿವೃದ್ಧಿಗಾಗಿ ಯೋಜನೆಯನ್ನು ರೂಪಿಸಲಾಗಿದೆಯೇ;

ಇ) ಇದರ ಅಂದಾಜು ವೆಚ್ಚವೆಷ್ಟು;

ಈ) ಈ ಕೆರೆ ಪುನರುಜ್ಜೀವನ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ; ಹಾಗಿದ್ದಲ್ಲಿ, ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು ಹಾಗೂ ಈ ಕೆರೆ ಕಾಮಗಾರಿ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ) ಬಂದಿದೆ.

ಆ) ಹೌದು.

ಇ) ಈ ಕಾಮಗಾರಿಗಾಗಿ ಅಂದಾಜು ಈ ಕೆಳಕಂಡಂತಿದೆ.

1. ಮೊದಲನೇ ಹಂತ ರೂ. 77.50 ಲಕ್ಷಗಳು.

2. ಎರಡನೇ ಹಂತ ರೂ. 136.00 ಲಕ್ಷಗಳು.

3. ಮೂರನೇ ಹಂತ ರೂ. 113.00 ಲಕ್ಷಗಳು.

4. ನಾಲ್ಕನೇ ಹಂತದ ಕಾಮಗಾರಿಗಳಿಗೆ 2005–06ನೇ ಸಾಲಿನ ಆಯವ್ಯಯದಲ್ಲಿ ರೂ. 200.00 ಲಕ್ಷಗಳನ್ನು ಕಾದಿರಿಸಲಾಗಿದೆ.

ಈ) ಈ ಕಾಮಗಾರಿಯನ್ನು 03 ಹಂತದಲ್ಲಿ ನೆರವೇರಿಸಲು ಉದ್ದೇಶಿಸಲಾಗಿದ್ದು, ಮೊದಲನೇ ಮತ್ತು ಎರಡನೇ ಹಂತದ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಮೂರನೇ ಹಂತದ ಕಾಮಗಾರಿ ಪ್ರಗತಿಯಲ್ಲಿದ್ದು, ಆಗಸ್ಟ್ 2005 ರಲ್ಲಿ ಪೂರ್ಣಗೊಳ್ಳುವುದು.

ಇದುವರೆವಿಗೂ ಕಾಮಗಾರಿಗಳಿಗಾಗಿ ಖರ್ಚು ಮಾಡಿದ ಹಣ ರೂ. 203.67 ಲಕ್ಷಗಳು.

5379(5429) ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಕೆ.ಎ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು;

ಆ) ಪ್ರತಿ ವರ್ಷ ತಮ್ಮ ಆಸ್ತಿ ಪಾಸ್ತಿಗಳ ಬಗ್ಗೆ ವರದಿ ಸಲ್ಲಿಸದೇ ಇರುವ ಕೆ.ಎ.ಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು;

ಇ) ಆಸ್ತಿ ಪಾಸ್ತಿಗಳ ಬಗ್ಗೆ ಸಲ್ಲಿಸಿರುವ ವರದಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಆಸ್ತಿ ಪಾಸ್ತಿಗಳ ವರದಿಯಲ್ಲಿ ನಮೂದಿಸಿರುವುದಕ್ಕಿಂತ ಅಧಿಕ ಆಸ್ತಿಯನ್ನು ಕೆಲವು ಕೆ.ಎ.ಎಸ್ ಅಧಿಕಾರಿಗಳು ಹೊಂದಿರುವುದನ್ನು ಪತ್ತೆ ಹಚ್ಚಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) 358

ಆ) ಪ್ರತಿ ವರ್ಷ ಎಲ್ಲಾ ಕೆ.ಎ.ಎಸ್ ಅಧಿಕಾರಿಗಳು ಅವರ ಆಸ್ತಿ ಪಾಸ್ತಿಗಳ ಬಗ್ಗೆ ನಿಯಮಾನುಸಾರ ವರದಿ ಸಲ್ಲಿಸಬೇಕಾಗಿದ್ದು, ಅದರಂತೆ ಎಲ್ಲಾ ಕೆ.ಎ.ಎಸ್ ಅಧಿಕಾರಿಗಳು ಸಾಮಾನ್ಯವಾಗಿ ತಮ್ಮ ಆಸ್ತಿ ಪಾಸ್ತಿಗಳ ವಿವರಗಳನ್ನು ಸಲ್ಲಿಸುತ್ತಿದ್ದಾರೆ. 2002–03 ಮತ್ತು 2003–04ನೇ ಸಾಲಿಗೆ ಈ ಆಸ್ತಿ–ಹೊಣೆಗಾರಿಕೆ ವಿವರಗಳನ್ನು ನೀಡಲು ವಿಳಂಬ ಮಾಡಿದ 72 ಅಧಿಕಾರಿಗಳಿಂದ ವಿವರಗಳನ್ನು ಪಡೆಯಲು ಕ್ರಮಕೈಗೊಳ್ಳಲಾಗಿದೆ.

ಇ) ಪ್ರತಿ ವರ್ಷ ಕೆ.ಎ.ಎಸ್. ಅಧಿಕಾರಿಗಳು ಸಲ್ಲಿಸಿದ ಆಸ್ತಿ–ಹೊಣೆಗಾರಿಕೆ ಪಟ್ಟಿಯನ್ನು ಪರಾಮರ್ಶಿಸಿ ಅವರ ವೈಯಕ್ತಿಕ ಕಡತಗಳಲ್ಲಿ ಟಿಪ್ಪಣಿ ಮಾಡಿಕೊಳ್ಳಲಾಗುತ್ತಿದೆ.

ಈ) ಆಸ್ತಿ–ಹೊಣೆಗಾರಿಕೆಗಳಲ್ಲಿ ನಮೂದಿಸಿರುವುದಕ್ಕಿಂತ ಅಧಿಕ ಆಸ್ತಿಯನ್ನು ಹೊಂದಿರುವ ಕುರಿತು ಲೋಕಾಯುಕ್ತ ಪೊಲೀಸರು ತನಿಖೆ ನಡೆಸುತ್ತಾರೆ. ಅವರ ವರದಿಗಳನ್ವಯ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

5380(6044) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವೀರಪ್ಪನ್ ಪ್ರಕರಣದಲ್ಲಿ ತಮ್ಮ ಜೀವನ ಹಂಗು ತೊರೆದು ಸಾಹಸ ಪ್ರದರ್ಶಿಸಿ ಸರ್ಕಾರಕ್ಕೆ ಒಳ್ಳೆಯ ಹೆಸರು ತಂದ ಎಸ್.ಟಿ.ಎಫ್. ಸಿಬ್ಬಂದಿಗಳಿಗೆ ಸರ್ಕಾರ ಘೋಷಿಸಿದ ಹಣವನ್ನು ಪಾವತಿ ಮಾಡಲಾಗಿದೆಯೇ?

ಆ) ಹಾಗಿಲ್ಲವಾದಲ್ಲಿ, ವಿಳಂಬಕ್ಕೆ ಕಾರಣಗಳೇನು? ಹಾಗೂ ಯಾವಾಗ ಪಾವತಿಸಲಾಗುವುದು?

ಇ) ಸದರಿ ಹಣವನ್ನು ಸರ್ಕಾರ ಪಾವತಿಸಲು ಕಾಲನಿಗಧಿಯನ್ನೇನಾದರೂ ನಿಗದಿ ಪಡಿಸಿದೆಯೇ?